# ದತ್ತಕದ ಸೂತ್ರ!

## ಅನಾಥ ಮಕ್ಕಳನ್ನು ದತ್ತು ತೆಗೆದುಕೊಳ್ಳಬಹುದೇ?



**ಕೊರೊನಾದಿಂದ ಅನಾಥರಾದ ಮಕ್ಕಳನ್ನು ದತ್ತು ಕೊಡಲಾಗುತ್ತದೆ ಎಂಬ ಸುದ್ದಿ ಇತ್ತೀಚೆಗೆ ವಾಟ್ಸ್‌ಆ್ಯಪ್, ಫೇಸ್‌ಬುಕ್ ಎಲ್ಲೆಡೆ ವ್ಯಾಪಕವಾಗಿ ಹರಿದಾಡುತ್ತಿದೆ. ಆದರೆ ದತ್ತು ಕೊಡುವ ಪ್ರಕ್ರಿಯೆ ಇಷ್ಟು ಸರಳವೇ? ಇದು ಕಾನೂನುಬದ್ಧವಾಗಿದೆಯೇ? ಕಾನೂನುಬದ್ಧ ದತ್ತಕ ಪ್ರಕ್ರಿಯೆ ಹೇಗಿರುತ್ತದೆ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರರೂಪವಾಗಿ ಈ ಬರಹವಿದೆ.**

■ **ಸೌಮ್ಯಲಕ್ಷ್ಮೀ ಭಟ್**

ಲೋಕಕ್ಕೇ ಒದಗುವ ಆಪತ್ತು– ಬಿಕ್ಕಟ್ಟುಗಳ ಸಮಯದಲ್ಲಿ ವ್ಯಕ್ತಿಗಳ, ಸಂಸ್ಥೆಗಳ, ಸಮಾಜದ ನಿಜ ಬಣ್ಣ ನಮಗೆ ಕಾಣಲು ಸಿಗುತ್ತದೆ ಎನ್ನಲಾಗುತ್ತದೆ. ಆಪತ್ತಿನ ಸಮಯದಲ್ಲಿ ಒಬ್ಬರಿಗೊಬ್ಬರು ಆಗುತ್ತೇವೆಯೇ, ಸಂಸ್ಥೆಗಳು ತಮ್ಮ ಕೆಲಸಗಾರರನ್ನು ಹೇಗೆ ನೋಡಿಕೊಳ್ಳುತ್ತವೆ, ಸರ್ಕಾರ ತನ್ನ ಕೆಲಸ ಪ್ರಾಮಾಣಿಕತೆ, ನಿಷ್ಠೆಯಿಂದ ಮಾಡುತ್ತಿದೆಯೇ ಎನ್ನುವುದು, ಆ ಸಮಾಜ, ಸರ್ಕಾರಗಳ ನಿಜ ಸ್ವರೂಪವನ್ನು ಕಾಣಿಸುತ್ತವೆ. ಇದೇ ರೀತಿಯಲ್ಲಿ, ಮಾಧ್ಯಮಗಳು ಹೇಗೆ ಸುದ್ದಿ ಬಿತ್ತರಿಸುತ್ತವೆ, ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಜನರು ಹೇಗೆ ನಡೆದುಕೊಳ್ಳುತ್ತಾರೆ ಎನ್ನವುದು ಒಟ್ಟೂ ಸಮಾಜದ ಮಾನಸಿಕ ಸ್ಥಿತಿಯನ್ನು ತೋರಿಸುತ್ತದೆ.

ಸಾಮಾಜಿಕ ಜಾಲತಾಣಗಳಂತೂ ಸುಳ್ಳುಸುದ್ದಿಗಳನ್ನೂ, ತಪ್ಪು ವಿಚಾರಗಳನ್ನೂ ಹಬ್ಬಿಸುವ ಮಾಧ್ಯಮಗಳಾಗಿವೆ. ಸೂಕ್ಷ್ಮ ವಿಷಯಗಳನ್ನು ಕೂಡಾ ತಮಗೆ ಬೇಕಾದಂತೆ, ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳುವ ಗೋಜಿಗೂ ಹೋಗದೇ, ಅವುಗಳನ್ನು ರೋಚಕವೆನಿಸುವ ಒಂದೇ ಉದ್ದೇಶದಿಂದ ಸಾಮಾಜಿಕ ಜಾಲತಾಣಗಳಲ್ಲಿ, ವಾಟ್ಸ್‌ಆ್ಯಪ್ ಇನ್ನಿತರ ಮಾಧ್ಯಮಗಳಲ್ಲಿ ಹಲವರೊಂದಿಗೆ ಹಂಚುವ ಮೂಲಕ ಈ ಅಪಾಯಕಾರಿ ಕ್ರಿಯೆಯಲ್ಲಿ ಜನಸಾಮಾನ್ಯರೂ ಭಾಗಿಯಾಗಿರುತ್ತೇವೆ.

ಇಂತಹ ಅಪಾಯಕಾರಿ ತಪ್ಪು ಮಾಹಿತಿ ಇತ್ತೀಚೆಗೆ ಅನಾಥ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ವಿಚಾರದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಕೋವಿಡ್‌ಗೆ ಇಬ್ಬರೂ ಪೋಷಕರನ್ನು ಕಳೆದುಕೊಂಡು ಅನಾಥರಾದ ಮಕ್ಕಳನ್ನು ದತ್ತು ತೆಗೆದುಕೊಳ್ಳುವಂತೆ ಕೇಳಿಕೊಳ್ಳುವ ಫೋಟೊ, ವಿಡಿಯೊ, ಪೋಸ್ಟ್‌ಗಳು ಬಹಳಷ್ಟು ಹರಿದಾಡುತ್ತಿದ್ದಂತೆಯೇ ಸರ್ಕಾರದ ವಕ್ತಾರರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಈ ವಿಚಾರದಲ್ಲಿ ಎಚ್ಚರಿಕೆಯ ಹೇಳಿಕೆಗಳನ್ನು ನೀಡಿದರು.

### ◆ ಕಾನೂನು ಸಮ್ಮತವೇ?

ಯಾವುದೇ ಮಗು ಅನಾಥ ಎಂದು ನಿಮಗನಿಸಿದ ಮಾತ್ರಕ್ಕೆ, ಅಥವಾ ಜಾಲತಾಣಗಳ ಮೂಲಕ 'ಅನಾಥ ಮಗು'ವೊಂದು ಕಂಡಾಕ್ಷಣ, ಆ ಮಗುವನ್ನು ದತ್ತು ತೆಗೆದುಕೊಳ್ಳಲು ಬರುವುದಿಲ್ಲ. ಹಾಗೆ ಮಾಡಿದರೂ ಅದು ಕಾನೂನಾತ್ಮಕ ದತ್ತು ಎನಿಸಿಕೊಳ್ಳುವುದಿಲ್ಲ.

ಎಷ್ಟೋ ಬಾರಿ, ಇಂತಹ ಸಂದರ್ಭಗಳಲ್ಲಿ, 'ಅನಾಥ ಮಗುವಿನ